**Q.P. Code – 50101**

**ಪ್ರಥಮ ಬಿ.ಎ./ಬಿ.ಕಾಂ./ಬಿ.ಎಸ್ಸಿ., ಪದವಿ ಪರೀಕ್ಷೆ, ಡಿಸೆಂಬರ್ 2017**

**(ದೂರ ಶಿಕ್ಷಣ)**

**ಕನ್ನಡ ಭಾಷಾ ಪತ್ರಿಕೆ – ೧**

**(DAA/DCA/DSA 010) – ಹೊಸಗನ್ನಡ ಕವಿತೆಗಳು, ಶೂದ್ರ ತಪಸ್ವಿ, ಬೆಟ್ಟದ ಜೀವ, ಆಡಳಿತ ಕನ್ನಡ**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ : **04**

(೧) ಚಳಿಗೆ ನಡುಗಲು ಮರುಕದಿಂದ
ಕೆಳಗೆ ಕಂಬಳಿ ಹಾಸಿ ಜೊತೆಯೊಳು
ಚೆಲುವ ಮರಿಗೂ ತಾಣವಿತ್ತೆನು
ಒಲುಮೆ ಬೆಸೆಯಿತು ಇಬ್ಬರ

(೨) ಅಲ್ತಲ್ತು ರಾಮಚಂದ್ರ
ಶೂದ್ರನ್ ತಪಂಗೆಯ್ವೊಂದು ಅಧರ್ಮಕ್ಕೆ
ವರ್ಣಾಶ್ರಮಧರ್ಮದುಲ್ಲಂಘನೆಯ ಪಾಪಕ್ಕೆ
ನಿನ್ನ ಬಾಲ ಪ್ರಜೆಯೋರ್ವನ್ ಬಲಿಯಾದನ್

(ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **$8 \times \frac{1}{2} = 04$**

ಬೊಬ್ಬೆ, ಬೊಮ್ಮ, ಹೆರಳು, ಗೇಹ, ಬಾನುಲಿ, ಚೊಟ್ಟು, ಅಂಬುಧಿ, ಪೂಣ್ಕೆ, ಜಿಹ್ವೆ, ಎಲರು, ಬಿಜ್ಜೆ, ವಿಪಿನ.

(ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **2 × 2 = 04**

(೧) ದೀಪಧಾರಿ

(೨) ವೈದೇಹಿ

(೩) ಶಂಬೂಕ

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **4 × 3 = 12**

(೧) ಕುಡಿನೀರನು ಒಣಗಿದ ನೆಲಕೆರೆವೋಲ್

(೨) ಅವಸರದ ಹೆಜ್ಜೆಯ ಮೇಲೆ ಸರಿವ ಸಾವಿರ ಕೊರಳು

(೩) ಹಳೆಯ ಬಾಗಿಲಿಗೆ ಹೊಸ ತೋರಣವ ಕಟ್ಟೋಣ

(೪) ಸಾಲದೇನಾ ಶೂದ್ರನ ತಪಕ್ಕೆ ಮುನಿದ ಧರ್ಮ ಶಾಪಂ!

(೫) ಅನುಭವವೇ ಪೇಳ್ವುದು ಇದು ಋಷಿಯ ಬೀಡೆಂದು

(೬) ಲಯವೇ ನಾನ್ ನನಗೆಲ್ಲಿ ಲಯಮಯ್?

3. ಬೆಳಗಿನ ಸೂರ್ಯೋದಯದ ವರ್ಣನೆಯನ್ನು 'ಬೆಳಗು' ಕವಿತೆ ಹೇಗೆ ಕಟ್ಟಿಕೊಡುತ್ತದೆ – ವಿಚಾರ ಮಾಡಿ. **08**

ಅಥವಾ

'ಕುರಿಗಳು ಸಾರ್ ಕುರಿಗಳು' ಪ್ರಜೆಗಳ ಮತ್ತು ಪ್ರಜಾ ಪ್ರತಿನಿಧಿಗಳ ಹುಂಬತನವನ್ನು ಹೇಗೆ ಪರಿಣಾಮಕಾರಿಯಾಗಿ ವಿಡಂಬಿಸುತ್ತದೆ? ವಿವರಿಸಿ.

4. ವೃಕ್ಷ ಭೈರವ ಮತ್ತು ಮೃತ್ಯುವಿನ ಮಧ್ಯೆ ನಡೆಯುವ ಸಂಭಾಷಣೆಯ ಮಹತ್ವವನ್ನು ವಿವರಿಸಿ. **08**

ಅಥವಾ

ಧರ್ಮ ಅಧರ್ಮಗಳ ಸತ್ಯಾಸತ್ಯತೆಯನ್ನು ಕುರಿತು 'ಶೂದ್ರ ತಪಸ್ವಿ' ನಾಟಕದ ಹಿನ್ನೆಲೆಯಲ್ಲಿ ಚರ್ಚಿಸಿ.

5. (೧) ಗೋಪಾಲಯ್ಯನವರ ಜೀವನ ದರ್ಶನವನ್ನು ಕಾದಂಬರಿಯ ಹಿನ್ನೆಲೆಯಲ್ಲಿ ನಿರೂಪಿಸಿ. **10**

ಅಥವಾ

ಸ್ವಚ್ಛಂದ ಪ್ರಕೃತಿಯಲ್ಲಿ ಗೋಪಾಲಯ್ಯನವರು ಕಟ್ಟಿಕೊಂಡ ಸಾಹಸದ ಬದುಕನ್ನು ಪರಿಚಯಿಸಿ.

(೨) ಕಾದಂಬರಿಯಲ್ಲಿ ಬರುವ ನಾರಾಯಣ ಮತ್ತು ಲಕ್ಷ್ಮೀಯರ ಬದುಕನ್ನು ಚಿತ್ರಿಸಿ. **10**

ಅಥವಾ

ಶಿವರಾಮಯ್ಯ, ದೇರಣ್ಣ. ಬಟ್ಯ – ಇವರಲ್ಲಿ ಇಬ್ಬರನ್ನು ಪರಿಚಯಿಸಿ.

6. (ಅ) ಸುತ್ತೋಲೆ ಎಂದರೇನು? **02**

(ಆ) ಜಾಹೀರಾತು ಎಂದರೇನು? ಜಾಹೀರಾತಿನ ಒಂದು ಮಾದರಿಯನ್ನು ಬರೆಯಿರಿ. **04**

(ಇ) ಜ್ಞಾಪನ ಪತ್ರದ ಸ್ವರೂಪತೆಯನ್ನು ತಿಳಿಸಿ. **04**

7. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

(**80** ಅಂಕಗಳ ಸ್ಕೀಮ್‌ನವರಿಗಾಗಿ **ಕಡ್ಡಾಯ** ಪ್ರಶ್ನೆ) :

(೧) ಸರ್ಕಾರಿ ಪತ್ರದ ವಿವಿಧ ಅಂಗಗಳನ್ನು ಸ್ಥೂಲವಾಗಿ ವಿವರಿಸಿ.

(೨) ಅರ್ಜಿ ಎಂದರೇನು? ಮುಂಗಡ ವೇತನವನ್ನು ಕೋರಿ ಮೇಲಾಧಿಕಾರಿಗೆ ಅರ್ಜಿಯೊಂದನ್ನು ಬರೆಯಿರಿ.